ಬಾಗೇಪಲ್ಲಿ ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ ಹಾಗೂ ಮರಳು ಸಾಗಾಣಿಕೆ.

1991(2482)

ಶ್ರೀ ಸಂಪಂಗಿ ಎನ್.(ಬಾಗೇಪಲ್ಲಿ): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಯಾವ ಯಾವ ಸ್ಥಳಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ; ಮತ್ತು ಯಾರ್ಯಾರಿಗೆ ಇಲಾಖೆವತಿಯಿಂದ ಪರವಾನಗಿ ನೀಡಲಾಗಿದೆ; ಗುತ್ತಿಗೆ ನೀಡಿದವರ ಹೆಸರು ಹಾಗೂ ವಿಳಾಸ ಮತ್ತು ಗುತ್ತಿಗೆ ನೀಡಿರುವ ಭೂಮಿಯ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ತಿಳಿಸುವುದು;

ಆ) ಈ ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮವಾಗಿ ಮರಳು ಸಾಗಾಣಿಕೆ ನಡೆಯುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದನ್ನು ತಡೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಇ) ಅಕ್ರಮ ಮರಳು ಸಾಗಾಣಿಕೆಯಿಂದ ಅಂತರ್ಜಲ ಕುಸಿದಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ?

ಈ) ರಾಜ್ಯದಾದ್ಯಂತ ಗಣಿಗಾರಿಕೆ ಪ್ರಾರಂಭಿಸಲು ಉದ್ದೇಶಿಸಲಾಗಿದೆಯೆ; ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಲ್ಲಿ ಪರವಾನಗಿ ನೀಡಲು ಉದ್ದೇಶಿಸಲಾಗಿದೆ; ಹಾಗೂ 1999ರಿಂದ ಈ ವರೆಗೆ ಎಲ್ಲೆಲ್ಲಿ ಪರವಾನಗಿ ನೀಡಲಾಗಿದೆ? (ವಿವರ ನೀಡುವುದು)

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಕೋಲಾರ ಜಿಲ್ಲೆ ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಗುಂಡ್ಲಪಲ್ಲಿ, ಚೌತಕುಂಟಪಲ್ಲಿ, ವಾಬಸಂದ್ರ, ಅನೂಪನಹಳ್ಳಿ, ಈಗೇನಹಳ್ಳಿ, ಯಲ್ಲೋಡು, ಕೊಂಡಿರೆಡ್ಡಿಹಳ್ಳಿ ಮತ್ತು ಎಲ್ಲೆಗಾರಹಳ್ಳಿಗಳಲ್ಲಿ ಕಲ್ಲು ಗಣಿ ಗುತ್ತಿಗೆಗಳನ್ನು ಇಲಾಖೆಯಿಂದ ಮಂಜೂರಾತಿ ನೀಡಲಾಗಿದೆ. (ಪಟ್ಟಿ ಲಗತ್ತಿಸಿದೆ).

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ. 1999ರಿಂದ ಇದುವರೆವಿಗೆ ಅಕ್ರಮವಾಗಿ ಮರಳನ್ನು ಸಾಗಿಸುತ್ತಿದ್ದವರ ವಿರುದ್ಧ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ-1994ರ ಅನ್ವಯ ದಂಡವನ್ನು ವಿಧಿಸಿದ್ದು ಇಂತಹ 26 ಪ್ರಕರಣಗಳಲ್ಲಿ ಒಟ್ಟು ರೂ.22,200 ಗಳನ್ನು ವಸೂಲಿ ಮಾಡಲಾಗಿದೆ. ಹಾಗೂ ಅಕ್ರಮ ಗಣಿಗಾರಿಕೆ ತಡೆಗಟ್ಟುವ ನಿಟ್ಟಿನಲ್ಲಿ ಹರಾಜು ಮೂಲಕ ಕಲ್ಲು ಗಣಿ ಗುತ್ತಿಗೆಗಳನ್ನು ಮಂಜೂರಾತಿ ಮಾಡಲಾಗಿದೆ. ಈ ಹರಾಜಿನಿಂದ ರೂ.11,57,100ಗಳು

ಬಂದಿರುತ್ತವೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಸರ್ಕಾರಿ ಅಧಿಸೂಚನೆ ಸಂಖ್ಯೆ : ಸಿಐ 2:ಎಂಎಂಎನ್.98 ದಿನಾಂಕ:16-10-2000ರ ಅಡಿಯಲ್ಲಿ ಸಾಧಾರಣ ಮರಳು ಸಾಗಾಣಿಕೆಯನ್ನು ಹರಾಜು ಮೂಲಕ ಮಂಜೂರಾತಿ ನೀಡಲು ತೀರ್ಮಾನಿಸಿದ್ದು, ದಿ:16-10-2000ದಿಂದ ಇದುವರೆಗೆ ಒಟ್ಟು 391 ಪ್ರದೇಶಗಳನ್ನು ಅಧಿಸೂಚನೆ ಮಾಡಿದ್ದು, ಇದರಲ್ಲಿ 106 ಪ್ರದೇಶಗಳನ್ನು ಹರಾಜು ಮಾಡಲಾಗಿದೆ. ಈ ಹರಾಜಿನಿಂದ ಸರ್ಕಾರಕ್ಕೆ ರೂ.1,09,08,200 ಸಂದಾಯವಾಗಿದೆ.

ಗುಡಿಬಂಡೆ ಹಾಗೂ ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಮಂಜೂರಾದ ಗುತ್ತಿಗೆಗಳ ವಿವರ.

ಕ್ರ. ಸಂ.	ಗುತ್ತಿಗೆದಾರರ ಹೆಸರು ಮತ್ತು ವಿಳಾಸ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ
1.	ಕೆ.ಪ್ರಭಾಕರರೆಡ್ಡಿ ಬಿನ್ ಎ.ಕೃಷ್ಣಾರೆಡ್ಡಿ ದಾಸಯ್ಯಗಾರಪಲ್ಲಿ, ಮಲ್ಲಸಂದ್ರ ಅಂಚೆ, ಬಾಗೇಪಲ್ಲಿ ತಾಲ್ಲೂಕು	ಗುಂಡ್ಲಪಲ್ಲಿ	99	2-00 ಎ
2.	ವೈ.ಎನ್.ರಾಮಕೃಷ್ಣಾರೆಡ್ಡಿ, ನಂ.10:9, ಪಿಡಬ್ಲ್ಯೂಡಿ ಕ್ವಾಟರ್ಸ್ ರಸ್ತೆ ಗುಡಿಬಂಡೆ ತಾಲ್ಲೂಕು.	ಜೌತಕುಂಟಪಲ್ಲಿ	51:2 ಎ2	4-00
3.	ಕೆ.ಸತ್ಯನಾರಾಯಣ, ನಂ.300 5ನೇ ಅಡ್ಡರಸ್ತೆ ಶ್ರೀ ಭೈರವೇಶ್ವರ ನಿಲಯ, ನೆಹರೂ ನಗರ, ಮಂಡ್ಯ.	ವಾಬಸಂದ್ರ ಅನೂಪನಹಳ್ಳಿ	4	3-20
4.	ಷೇಕ್ ಫಕೃದ್ದೀನ್, ಉಪ್ಪಾರಹಳ್ಳಿ ಗ್ರಾಮ, ವಾಬಸಂದ್ರ, ಗುಡಿಬಂಡೆ ತಾಲ್ಲೂಕು.	ವಾಬಸಂದ್ರ	113	4.26
5.	ಶ್ರೀಮತಿ ಹೆಚ್.ಎನ್.ಬೈಯಮ್ಮ ಬಿನ್ ದೊಡ್ಡನರಸಿಂಹರೆಡ್ಡಿ ಹಳೇಗುಡಿಬಂಡೆ, ಗುಡಿಬಂಡೆ ತಾಲ್ಲೂಕು	ಈಗೇನಹಳ್ಳಿ	25	1-00
6.	ಬಿ.ಎಂ.ಚನ್ನಾರೆಡ್ಡಿ ಕೆ.ಆಫ್. ದೊಡ್ಡನರಸಿಂಹರೆಡ್ಡಿ ಹಳೇಗುಡಿಬಂಡಾ, ಗುಂಡಿಬಂಡೆ ತಾಲ್ಲೂಕು.	ಎಲ್ಲೋಡು	80	1-23
7.	ಆರ್.ಮುರಳಿ, ಬಿನ್ ಆರ್.ಕೆ.ರಾಮಕೃಷ್ಣಪ್ಪ ಮಾಲೂರು ಅಂಚೆ, ಶಿಡ್ಲಘಟ್ಟ ತಾಲ್ಲೂಕು.	ಎಲ್ಲೋಡು	80	1-23

8.	ಶ್ರೀಮತಿ ವಿಜಯವಾಣಿ ಶ್ರೀನಿವಾಸ್ ನಂ.201, 5ನೇ ಬ್ಲಾಕ್, 68ನೇ ಕ್ರಾಸ್ ರಾಜಾಜಿನಗರ ಬೆಂಗಳೂರು-10.	ಎಲ್ಲೋಡು	80	1-20
9.	ಕೆ.ಜಿ.ದಶವಂತಸಿಂಗ್, ಬಿನ್ ಜಯರಾಂಸಿಂಗ್, ಎಲ್ಲೋಡು, ಸಿ.ಕೆ.ಹಳ್ಳಿ ಅಂಚೆ, ಗುಡಿಬಂಡೆ ತಾಲ್ಲೂಕು.	ಎಲ್ಲೋಡು	75:2	0-25
10.	ಜೆ.ಎಂ.ಚನ್ನಾರೆಡ್ಡಿ ಕೆ.ಆಫ್. ದೊಡ್ಡನರಸಿಂಹರೆಡ್ಡಿ ಹಳೇಗುಡಿಬಂಡೆ ಗುಡಿಬಂಡಾ ತಾಲ್ಲೂಕು.	ಪಲ್ಲೆಗಾರಹಳ್ಳಿ	14	2-00
11.	ಶ್ರೀಮತಿ ವಿಜಯವಾಣಿ ಶ್ರೀನಿವಾಸ್ ನಂ.201, 5ನೇ ಬ್ಲಾಕ್, 68ನೇ ಕ್ರಾಸ್, ರಾಜಾಜಿನಗರ, ಬೆಂಗಳೂರ -10	ಕೊಂಡಿರೆಡ್ಡಿಹಳ್ಳಿ	14	2-20
12.	ಎ.ಶ್ರೀನಿವಾಸ್, ಬಿನ್ ಅಶ್ವಥನಾರಾಯಣರೆಡ್ಡಿ ಸಾದೇನಹಳ್ಳಿ, ಮಂಚೇನಹಳ್ಳಿ ಹೋಬಳಿ, ಗೌರಿಬಿದನೂರು ತಾಲ್ಲೂಕು	ಎಲ್ಲೋಡು	80	1-20